# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ರಾಜ್ಯದಲ್ಲಿ ನೂತನವಾಗಿ ರಚನೆಯಾಗಿರುವ 462 ಗ್ರಾಮ ಪಂಚಾಯತಿಗಳ ಪೈಕಿ 150 ಗ್ರಾಮ ಪಂಚಾಯತಿ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವ ಬಗ್ಗೆ. – ಆದೇಶ.

**ಓದಲಾಗಿದೆ:**

1. 2016–17 ನೇ ಸಾಲಿನ ಆಯವ್ಯಯ ಘೋಷಣೆಯ ಕ್ರಮ ಸಂಖ್ಯೆ 287
2. ಸಮಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ: 28.12.2016.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಹೊಸದಾಗಿ ರಚಿಸಲಾದ ಗ್ರಾಮ ಪಂಚಾಯತಿಗಳ ಆಡಳಿತ ವ್ಯವಸ್ಥೆಗೆ ಅನುಕೂಲವಾಗುವಂತೆ ರೂ. 30 ಕೋಟಿಗಳನ್ನು ಕಟ್ಟಡ ಮುಂತಾದ ಮೂಲಸೌಕರ್ಯಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. 2017–18 ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2215–01–102–1–16–059 ರಡಿ ರೂ. 30.00 ಕೋಟಿಗಳನ್ನು ಅನುದಾನವನ್ನು ನಿಗಧಿಪಡಿಸಲಾಗಿದೆ.

ಹೊಸದಾಗಿ ಸೃಜನೆಯಾಗಿರುವ ಗ್ರಾಮ ಪಂಚಾಯತಿಗಳು ಪ್ರಸ್ತುತ ತಾತ್ಕಾಲಿಕ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಗ್ರಾಮ ಪಂಚಾಯತಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಬೇಕಾಗಿದೆ. ಸದರಿ ಗ್ರಾಮ ಪಂಚಾಯತಿಗಳಿಗೆ ಸರ್ಕಾರದ ವತಿಯಿಂದ ರೂ. 40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಪೈಕಿ ಸರ್ಕಾರದ ಅನುದಾನ ರೂ. 20.00 ಲಕ್ಷ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೈಗೊಳ್ಳುವ ರಾಜೀವ ಗಾಂಧಿ ಸೇವಾ ಕೇಂದ್ರ ನಿರ್ಮಾಣ ಮಾಡಲು ಮೀಸಲಿಟ್ಟಿರುವ ಅನುದಾನ ರೂ. 16.25 ಲಕ್ಷ ಹಾಗೂ 14ನೇ ಹಣಕಾಸು ಯೋಜನೆ ಅಥವಾ ಗ್ರಾಮ ಪಂಚಾಯತಿಗಳ ಇನ್ನಿತರೆ ಅನುದಾನದಡಿ ಉಳಿಕೆಯಾಗಿರುವ ರೂ. 3.75 ಲಕ್ಷಗಳನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ ಸರ್ಕಾರದ ವತಿಯಿಂದ ರೂ. 40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಾರಂಭಿಸುವ ಬಗ್ಗೆ ವಿವರಿಸಲಾಗಿದ್ದು, ಸರ್ಕಾರದ ವತಿಯಿಂದ 162 ಗ್ರಾಮ ಪಂಚಾಯತಿಗಳಿಗೆ ತಲಾ ರೂ. 10.00 ಲಕ್ಷಗಳಂತೆ ಬಿಡುಗಡೆ ಮಾಡಲಾಗಿದೆ.

ಪ್ರಸ್ತುತ 150 ಗ್ರಾಮ ಪಂಚಾಯತಿಗಳಿಗೆ ತಲಾ ರೂ. 10.00 ಲಕ್ಷಗಳಂತೆ ಬಿಡುಗಡೆ ಮಾಡಲು ಉದ್ದೇಶಿಸಿದ್ದು, ಉಳಿದ ಅನುದಾನವನ್ನು ಮೇಲೆ ಓದಲಾದ (2) ರ ಆದೇಶದಂತೆ ಕ್ರಮ ವಹಿಸಲು ತಿಳಿಸಲಾಗಿದೆ. (150 ಗ್ರಾಮ ಪಂಚಾಯತಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ನೂತನವಾಗಿ ಸೃಜಿಸಲಾದ 462 ಗ್ರಾಮ ಪಂಚಾಯತಿಗಳಲ್ಲಿ ಅನುಬಂಧದಲ್ಲಿ ತಿಳಿಸಿರುವ 150 ಗ್ರಾಮ ಪಂಚಾಯತಿಗಳಿಗೆ ಕಟ್ಟಡಗಳನ್ನು ನಿರ್ಮಿಸಲು ಪ್ರತಿ ಗ್ರಾಮ ಪಂಚಾಯತಿಗಳಿಗೆ ರೂ. 10.00 ಲಕ್ಷಗಳಂತೆ ಒಟ್ಟು ರೂ. 15.00 ಕೋಟಿಗಳನ್ನು (ಹದಿನೈದು ಕೋಟಿ ರೂಪಾಯಿಗಳು ಮಾತ್ರ) ಸಂಬಂಧಿಸಿದ ಗ್ರಾಮ ಪಂಚಾಯತಿಗಳ 14ನೇ ಹಣಕಾಸು ಆಯೋಗದ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/350/ಗ್ರಾಪಂಅ/2015(ಪಿ 3), ಬೆಂಗಳೂರು, ದಿನಾಂಕ: 16.09.2017

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಜ್ಯದಲ್ಲಿ ನೂತನವಾಗಿ ಸೃಜಿಸಲಾದ 462 ಗ್ರಾಮ ಪಂಚಾಯತಿಗಳಲ್ಲಿ ಅನುಬಂಧದಲ್ಲಿ ಹೆಸರಿಸಿರುವ 150 ಗ್ರಾಮ ಪಂಚಾಯತಿಗಳಿಗೆ ಪ್ರತಿ ಗ್ರಾಮ ಪಂಚಾಯತಿಗೆ ತಲಾ ರೂ. 10.00 ಲಕ್ಷಗಳಂತೆ ಒಟ್ಟು ರೂ. 15.00 ಕೋಟಿಗಳನ್ನು (ಹದಿನೈದು ಕೋಟಿ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ(ಜಿಲ್ಲಾ ಪಂಚಾಯತ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ರಾಜ್ಯ ಹುಜೂರ್ ಖಜಾನೆಯಿಂದ ಪೇಯೀಸ್ ರಸೀತಿಯ ಮೇಲೆ ಡ್ರಾ ಮಾಡಿ, ಈ ಮೊತ್ತವನ್ನು ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆಯ ಮೂಲಕ ಸಂಬಂಧಿಸಿದ ಗ್ರಾಮ ಪಂಚಾಯತಿಗಳ 14ನೇ ಹಣಕಾಸು

ಆಯೋಗದ ಉಳಿತಾಯ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ವರ್ಗಾಯಿಸಲು ಆದೇಶಿಸಿದೆ. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2215-01-102-1-16-059 ಅಡಿಯಲ್ಲಿ ಭರಿಸಲು ತಿಳಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ:01 ಟಿಎಫ್‌ಪಿ:2017, ಬೆಂಗಳೂರು, ದಿನಾಂಕ 05.04.2017 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ. ಸುಮಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣ ಭವನ, ಆನಂದರಾವ್ ವೃತ್ತ, ಬೆಂಗಳೂರು.
4. ಕಾರ್ಯದರ್ಶಿಗಳು, ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ.
5. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
7. ನಿರ್ದೇಶಕರು, ಎನ್.ಎಮ್.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
8. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ನಿರ್ದೇಶಕರು, ಗ್ರಾಮೀಣ ಮೂಲಸೌಕರ್ಯ-2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
10. ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು.
11. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು.
12. 462 ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಅಧ್ಯಕ್ಷರುಗಳು, ಕಾರ್ಯ ನಿರ್ವಾಹಕ ಅಧಿಕಾರಿಗಳ ಮೂಲಕ.

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ,
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಆಪ್ತ ಕಾರ್ಯದರ್ಶಿ.
4. ನಿರ್ದೇಶಕರು (ಪಂ.ರಾಜ್-1). ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಆಪ್ತ ಕಾರ್ಯದರ್ಶಿ.
5. ಕಛೇರಿ/ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತಕ್ಕೆ.

# ಅನುಬಂಧ

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ |
|---|---|---|---|
| 01 | ಬೆಂಗಳೂರು ನಗರ | ಬೆಂಗಳೂರು ಉತ್ತರ | ಅಡಕಮಾರನಹಳ್ಳಿ |
| 02 | | ಬೆಂಗಳೂರು ಉತ್ತರ | ಶ್ರೀಕಂಠಪುರ |
| 03 | | ಬೆಂಗಳೂರು ಉತ್ತರ | ಚಿಕ್ಕಬಿದರಕಲ್ಲು |
| 04 | | ಬೆಂಗಳೂರು ಉತ್ತರ | ಲಕ್ಷ್ಮೀಪುರ |
| 05 | | ಬೆಂಗಳೂರು ಉತ್ತರ | ಸಿದ್ಧನಹೊಸಹಳ್ಳಿ |
| 06 | | ಬೆಂಗಳೂರು ಉತ್ತರ | ಮೀನುಕುಂಟೆ |
| 07 | | ಬೆಂಗಳೂರು ದಕ್ಷಿಣ | ಅಜ್ಜನಹಳ್ಳಿ |
| 08 | | ಬೆಂಗಳೂರು ದಕ್ಷಿಣ | ನೆಲಗುಳಿ |
| 09 | | ಬೆಂಗಳೂರು ದಕ್ಷಿಣ | ಚನ್ನೇನಹಳ್ಳಿ |
| 10 | | ಬೆಂಗಳೂರು ಪೂರ್ವ | ಕನ್ನಮಂಗಲ |
| 11 | | ಬೆಂಗಳೂರು ಪೂರ್ವ | ಕಿತ್ತಗನೂರು |
| 12 | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | ಚೊಕ್ಕಹಳ್ಳಿ |
| 13 | | ದೇವನಹಳ್ಳಿ | ಮಂಡಿಬೆಲೆ |
| 14 | | ದೇವನಹಳ್ಳಿ | ಐಬಸಾಪುರ |
| 15 | | ದೇವನಹಳ್ಳಿ | ಆಲೂರು ದುದ್ದನಹಳ್ಳಿ |
| 16 | | ನೆಲಮಂಗಲ | ವಾಜರಹಳ್ಳಿ |
| 17 | | ನೆಲಮಂಗಲ | ಗೊಲ್ಲಹಳ್ಳಿ |
| 18 | ಶಿವಮೊಗ್ಗ | ಶಿವಮೊಗ್ಗ | ಬೇಡರಹೊಸಹಳ್ಳಿ |
| 19 | | ಶಿವಮೊಗ್ಗ | ತುಪ್ಪೂರು |
| 20 | | ಶಿವಮೊಗ್ಗ | ಕೋಹಳ್ಳಿ |
| 21 | | ಸೊರಬ | ಅಂಡಿಗೆ |
| 22 | ತುಮಕೂರು | ಶಿರಾ | ಚಂಗಾವರ |
| 23 | | ಶಿರಾ | ಯಲದಬಾಗಿ |
| 24 | ಬೆಳಗಾವಿ | ಬೆಳಗಾವಿ | ಮಾರ್ಕಂಡೇಯನಗರ |
| 25 | | ರಾಯಭಾಗ | ಕೆಂಪಟ್ಟಿ |
| 26 | | ಗೋಕಾಕ | ಪಟಗುಂದಿ |
| 27 | | ಗೋಕಾಕ | ತಪಸಿ |
| 28 | | ಗೋಕಾಕ | ಬೆಣಚಿನಮರ್ಡಿ |
| 29 | | ಗೋಕಾಕ | ಕಾಮನಕಟ್ಟಿ |
| 30 | | ಗೋಕಾಕ | ಮಿಡಕನಕಟ್ಟಿ |
| 31 | | ಗೋಕಾಕ | ಗುಜನಟ್ಟಿ |
| 32 | | ಗೋಕಾಕ | ದಂಡಾಪುರ |
| 33 | | ಗೋಕಾಕ | ಖಾನಟ್ಟಿ |
| 34 | | ಅಥಣಿ | ಕನ್ನಾಳ |
| 35 | | ಅಥಣಿ | ಚಮಕೇರಿ |
| 36 | | ಅಥಣಿ | ಜಕ್ಕಾರಟ್ಟಿ |
| 37 | | ಅಥಣಿ | ಸಿದ್ದೇವಾಡಿ |
| 38 | ವಿಜಯಪುರ | ವಿಜಯಪುರ | ಕಮತಗಿ |
| 39 | | ವಿಜಯಪುರ | ಜುಮನಾಳ |
| 40 | | ಬಸವನಬಾಗೇವಾಡಿ | ಬೇನಾಳ ಆರ್.ಸಿ. |
| 41 | | ಇಂಡಿ | ಚವಡಿಹಾಳ |
| 42 | | ಇಂಡಿ | ಉಮರಜ |
| 43 | | ಇಂಡಿ | ಸಂಗೋಗಿ |
| 44 | | ಸಿಂಧಗಿ | ನಾಗಾವಿ ಬಿ.ಕೆ. |
| 45 | | ಸಿಂಧಗಿ | ರಾಮನಹಳ್ಳಿ |

| | | | |
|---|---|---|---|
| 46 | ಬಾಗಲಕೋಟೆ | ಬಾಗಲಕೋಟೆ | ಶೀಗಿಕೇರಿ |
| 47 | | ಬಾಗಲಕೋಟೆ | ನೀಲಾನಗರ |
| 48 | | ಬಾಗಲಕೋಟೆ | ಹೊಸೂರ |
| 49 | | ಬಾಗಲಕೋಟೆ | ಚಿಕ್ಕಮ್ಯಾಗೇರಿ |
| 50 | | ಬಾದಾಮಿ | ಕೈನಕಟ್ಟಿ |
| 51 | | ಬಾದಾಮಿ | ಹಂಗರಗಿ |
| 52 | | ಬಾದಾಮಿ | ಮಂಗಳಗುಡ್ಡ |
| 53 | | ಬಾದಾಮಿ | ಕೆಂದೂರು |
| 54 | | ಹುನಗುಂದ | ಬಿಸಿಲದಿನ್ನಿ |
| 55 | | ಹುನಗುಂದ | ಹಿರೇಮಳಗಾವಿ |
| 56 | | ಹುನಗುಂದ | ಚಿಕ್ಕಕೊಡಗಲಿ |
| 57 | | ಹುನಗುಂದ | ಹೂವಿನಹಳ್ಳಿ |
| 58 | | ಹುನಗುಂದ | ಮುರಡಿ |
| 59 | | ಹುನಗುಂದ | ಹಾವರಗಿ |
| 60 | | ಜಮಖಂಡಿ | ತಮದಡ್ಡಿ |
| 61 | | ಜಮಖಂಡಿ | ಸಿದ್ದಾಪುರ |
| 62 | | ಜಮಖಂಡಿ | ಯಲ್ಲಟ್ಟಿ |
| 63 | | ಜಮಖಂಡಿ | ಮರೇಗುದ್ದಿ |
| 64 | | ಜಮಖಂಡಿ | ಅಡಿಹುಡಿ |
| 65 | | ಮುಧೋಳ | ನಂದಗಾಂವ |
| 66 | | ಮುಧೋಳ | ಸೋರಗಾಂವ |
| 67 | | ಮುಧೋಳ | ಮೆಳ್ಳಿಗೇರಿ |
| 68 | | ಮುಧೋಳ | ಬರಗಿ |
| 69 | | ಬೀಳಗಿ | ಹೆಗ್ಗೂರ |
| 70 | | ಬೀಳಗಿ | ನಾಗರಾಳ |
| 71 | | ಬೀಳಗಿ | ಬೂದಿಹಾಳ ಎಸ್. ಹೆಚ್. |
| 72 | | ಬೀಳಗಿ | ಕೊರ್ತಿ |
| 73 | ಧಾರವಾಡ | ಕುಂದಗೋಳ | ದೇವನೂರ |
| 74 | | ಕುಂದಗೋಳ | ಗುರುವಿನಹಳ್ಳಿ |
| 75 | | ಹುಬ್ಬಳ್ಳಿ | ಬಂಡಿವಾಡ |
| 76 | | ಹುಬ್ಬಳ್ಳಿ | ಶೆರೇವಾಡ |
| 77 | | ಹುಬ್ಬಳ್ಳಿ | ಅಗಡಿ |
| 78 | | ಹುಬ್ಬಳ್ಳಿ | ಚನ್ನಾಪುರ |
| 79 | ಉತ್ತರ ಕನ್ನಡ | ಕಾರವಾರ | ತೋಡುರು |
| 80 | | ಅಂಕೋಲ | ಹೊನ್ನೇಬೈಲು |
| 81 | | ಕುಮಟ | ಕಲ್ಲಬ್ಬೆ |
| 82 | | ಹೊನ್ನಾವರ | ಮಾಗೋಡ |
| 83 | | ಹೊನ್ನಾವರ | ಮಂಕಿ ಎ (ಹಳೇಮಠ) |
| 84 | | ಹೊನ್ನಾವರ | ಮಂಕಿ ಬಿ (ಅನಂತವಾಡಿ) |
| 85 | | ಭಟ್ಕಳ | ಮಾವಳ್ಳಿ-2 |
| 86 | | ಶಿರ್ಸಿ | ಸೋಂದಾ |
| 87 | | ಶಿರ್ಸಿ | ಮೇಲಿನ ಓಣಿಕೇರಿ |
| 88 | | ಶಿರ್ಸಿ | ಸದಾಶಿವಳ್ಳಿ(ಕಾರಗೂಡ) |
| 89 | | ಶಿರ್ಸಿ | ಮಂಜುಗುಣಿ |
| 90 | | ಶಿರ್ಸಿ | ಹಲಗದ್ದೆ (ಕೊರ್ಲಕಟ್ಟ) |
| 91 | | ಸಿದ್ದಾಪುರ | ತಂಡಾಗುಂಡಿ |
| 92 | | ಸಿದ್ದಾಪುರ | ಕೊರ್ಲಕೈ (ಆಡುಕಟ್ಟಾ) |
| 93 | | ಯಲ್ಲಾಪುರ | ಚಂದಗುಳಿ (ಉಪಳೇಶ್ವರ) |
| 94 | | ಮುಂಡಗೋಡ | ಮೈನಳ್ಳಿ |
| 95 | | ಮುಂಡಗೋಡ | ನಾಗನೂರ (ಹನುಮಾಪುರ) |

| | | | |
|---|---|---|---|
| 96 | | ಮುಂಡಗೋಡ | ಓರಲಗಿ (ಓಣಿಕೇರಿ) |
| 97 | | ಹಳಿಯಾಳ | ಮೊದಲಗೇರಾ |
| 98 | | ಹಳಿಯಾಳ | ಬಡಾಕಾನಶಿರಡಾ |
| 99 | ಮೈಸೂರು | ಹುಣಸೂರು | ಗುರುಪುರ |
| 100 | | ಹುಣಸೂರು | ಕಡೇಮಣುಗನಹಳ್ಳಿ |
| 101 | | ಹುಣಸೂರು | ಕಿರಂಗೂರು |
| 102 | | ಹುಣಸೂರು | ಮೂಕನಹಳ್ಳಿ |
| 103 | | ಹುಣಸೂರು | ಮೋದೂರು |
| 104 | | ಹುಣಸೂರು | ಉದ್ದೂರು |
| 105 | | ಕೆ. ಆರ್. ನಗರ | ಶೀಗವಾಳು |
| 106 | | ಕೆ. ಆರ್. ನಗರ | ಸಿದ್ದಾಪುರ (ಡಿ.ಕೆ.ಕೊಪ್ಪಲು) |
| 107 | | ಹೆಚ್.ಡಿ. ಕೋಟೆ | ಬಾಚೇಗೌಡನಹಳ್ಳಿ |
| 108 | | ಹೆಚ್.ಡಿ. ಕೋಟೆ | ಇಟ್ನಾ |
| 109 | | ಹೆಚ್.ಡಿ. ಕೋಟೆ | ಹಾದನೂರು |
| 110 | | ಹೆಚ್.ಡಿ. ಕೋಟೆ | ಹೊಸಹೊಳಲು |
| 111 | | ಪಿರಿಯಾಪಟ್ಟಣ | ಕಿರನಲ್ಲಿ |
| 112 | | ಪಿರಿಯಾಪಟ್ಟಣ | ಚೌತಿ |
| 113 | | ಪಿರಿಯಾಪಟ್ಟಣ | ನವಿಲೂರು |
| 114 | | ಪಿರಿಯಾಪಟ್ಟಣ | ಆವರ್ತಿ |
| 115 | ಹಾಸನ | ಅರಕಲಗೂಡು | ಕಡವಿನಹೊಸಹಳ್ಳಿ |
| 116 | | ಅರಕಲಗೂಡು | ತರಿಗಳಲೆ |
| 117 | | ಅರಕಲಗೂಡು | ಮೊಕಲಿ |
| 118 | | ಅರಕಲಗೂಡು | ಕೊರಟಿಕೆರೆ |
| 119 | ಕೊಡಗು | ಮಡಿಕೇರಿ | ಅಯ್ಯಂಗೇರಿ |
| 120 | | ಮಡಿಕೇರಿ | ಎಮ್ಮೆಮಾಡು |
| 121 | ಚಾಮರಾಜನಗರ | ಕೊಳ್ಳೇಗಾಲ | ಶೆಟ್ಟಳ್ಳಿ |
| 122 | | ಕೊಳ್ಳೇಗಾಲ | ಮಿಣ್ಯಂ |
| 123 | | ಕೊಳ್ಳೇಗಾಲ | ತಿಮ್ಮರಾಜಿಪುರ |
| 124 | | ಗುಂಡ್ಲುಪೇಟೆ | ಕೂತನೂರು |
| 125 | | ಗುಂಡ್ಲುಪೇಟೆ | ವಡ್ಡಗೆರೆ |
| 126 | ದಕ್ಷಿಣ ಕನ್ನಡ | ಮಂಗಳೂರು | ಇರುವೈಲ್ |
| 127 | | ಮಂಗಳೂರು | ಅತಿಕಾರಿಬೆಟ್ಟು |
| 128 | | ಮಂಗಳೂರು | ಕೊಂಡೆಮೂಲ |
| 129 | | ಮಂಗಳೂರು | ಮೂತ್ತೂರು |
| 130 | | ಬಂಟ್ವಾಳ | ಕಳ್ಳಿಗೆ |
| 131 | | ಬಂಟ್ವಾಳ | ಬೋಳಂತೂರು |
| 132 | | ಬಂಟ್ವಾಳ | ಪೆರಾಜೆ |
| 133 | | ಬಂಟ್ವಾಳ | ಸಾಲೆತ್ತೂರು |
| 134 | | ಬಂಟ್ವಾಳ | ಇರವತ್ತೂರು |
| 135 | | ಬಂಟ್ವಾಳ | ಅರಳ |
| 136 | | ಬಂಟ್ವಾಳ | ಮಾಣಿಲ |
| 137 | | ಬಂಟ್ವಾಳ | ಮಣಿನಾಲ್ಕೂರು |
| 138 | | ಪುತ್ತೂರು | ಕುಡಿಪ್ಪಾಡಿ |
| 139 | | ಪುತ್ತೂರು | ಕೆಯ್ಯೂರು |
| 140 | | ಬೆಳ್ತಂಗಡಿ | ಕಡಿರುದ್ಯಾವರ |
| 141 | | ಬೆಳ್ತಂಗಡಿ | ತೆಕ್ಕಾರು |
| 142 | | ಬೆಳ್ತಂಗಡಿ | ಕೆಳಂಜ |
| 143 | ಉಡುಪಿ | ಕುಂದಾಪುರ | ಇಡೂರು ಕುಂಜ್ಞಾಡಿ |
| 144 | | ಕುಂದಾಪುರ | ಕಟ್ಬೆಬಲ್ತೂರು |
| 145 | | ಕುಂದಾಪುರ | ಎಡಮೊಗೆ |

| | | | |
|---|---|---|---|
| 146 | | ಕುಂದಾಪುರ | ಉಳ್ಳೂರು – 74 |
| 147 | | ಕುಂದಾಪುರ | ಕೊರ್ಗಿ |
| 148 | | ಕಾರ್ಕಳ | ಕೆರ್ವಾಶೆ |
| 149 | | ಕಾರ್ಕಳ | ಇರ್ವತ್ತೂರು |
| 150 | | ಕಾರ್ಕಳ | ನಂದಳಿಕೆ |